ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ

ಚನ್ನಪಟ್ಟಣ.

CC No. 226/2016

CW-2 PW-3

| | | |
|---|---|---|
| ಹೆಸರು | : | ರಾಜು |
| ಗಂಡನ ಹೆಸರು/ತಂದೆಯ ಹೆಸರು | : | ಜವರಯ್ಯ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಕೂಲಿ |
| ವಾಸ | : | ಕೆಳಗೆರೆ ಗ್ರಾಮ. |

**ದಿನಾಂಕ 03.01.2023 ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ**

ನನಗೆ ಆರೋಪಿತರು ಗೊತ್ತು. ನನಗೆ ಚಾಸಾ1, 3 ರಿಂದ 5 ರವರ ಪರಿಚಯವಿರುತ್ತದೆ.ಚಾಸಾ1 ಹಾಗೂ ಆರೋಪಿತರ ನಡುವೆ ಆಗಿರುವ ಜಗಳ ನನಗೆ ಗೊತ್ತಿಲ್ಲ. ಆರೋಪಿತರು ಚಾಸಾ1 ರವರಿಗೆ ಅವಾಚ್ಯ ಶಬ್ದದಿಂದ ನಿಂದಿಸಿರುವುದಿಲ್ಲ, ನಾನು ಯಾವುದೇ ಘಟನೆಯನ್ನು ಪ್ರತ್ಯಕ್ಷವಾಗಿ ಕಂಡಿರುವುದಿಲ್ಲ. ಸದರಿ ವಿಚಾರವಾಗಿ ಪೋಲಿಸರಿಗೆ ನಾನು ಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಅನುಮತಿ ಕೋರಿದ್ದಾರೆ, ಅನುಮತಿಸಲಾಯಿತು).**

**ಪಾಟೀ ಸವಾಲುಃ ಎಪಿಪಿಯವರಿಂದಃ**

ದಿನಾಂಕ 31.12.2015 ರಂದು ಸಂಜೆ 4.00 ಗಂಟೆಯ ಸಮಯದಲ್ಲಿ ಚಾಸಾ-1 ರವರು ಆರೋಪಿ 1, 2 ರವರು ಅಕ್ಕಿ ಮತ್ತು ರಾಗಿಯನುನ ಅಳತೆ ಮಾಡಿಕೊಳ್ಳುತ್ತಿದ್ದಾಗ ಚಾಸಾ-1 ರವರಿಗೆ 1 ನೇ ಆರೋಪಿ ನೀನೇನು ನಮ್ಮ ಅತ್ತೆನಾ ರಾಗಿ ಮತ್ತು ಅಕ್ಕಿಯನ್ನು ಅಳತೆ ಮಾಡಿಕೊಡಲು ಎಂದು ಕೇಳಿದ ವಿಚಾರದಲ್ಲಿ 1 ನೇ ಆರೋಪಿ ಚಾಸಾ1 ರವರಿಗೆ ಈ ಮನೆ ನಮ್ಮ ತಂದೆಯ ಮನೆ ನಿನಗೇನು ಅಧಿಕಾರ ಇಲ್ಲ ಎಂದು ಏಕಾಏಕಿ ಜಗಳ ತೆಗೆದು, ಅವಾಚ್ಯ ಶಬ್ದದಿಂದ ನಿಂದಿಸಿರುತ್ತಾರೆಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಮು ಮಾ 1 ಕುಡ್ಲುವಿನಿಂದ ಎಡಗೈಗೆ ಹೊಡೆದು ಗಾಯ ಪಡಿಸಿರುತ್ತಾರೆಂದರೆ ಸರಿಯಲ್ಲ. ಚಾಸಾ-1 ರವರಿಗೆ 2 ನೇ ಆರೋಪಿ ಅವಾಚ್ಯ ಶಬ್ದದಿಂದ ನಿಂದಿಸಿರುತ್ತಾರೆಂದರೆ ಸರಿಯಲ್ಲ. ಸದರಿ ಘಟನೆಯನ್ನು ನಾನು ಪ್ರತ್ಯಕ್ಷವಾಗಿ ಕಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಈಗ ಓದಿ ಹೇಳಿದಂತೆ ನಿಪಿ-4 ರಂತೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-4 ರಲ್ಲಿರುವ ಪೂರ್ಣ ಸಂಗತಿ ಗೊತ್ತಿದ್ದರೂ ಸಹ, ಘಟನೆಯನ್ನು ಪ್ರತ್ಯಕ್ಷವಾಗಿ ಕಂಡಿದ್ದರೂ ಸಹ ಆರೋಪಿಯೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಇಲ್ಲ**

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.